ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 4, September-October 2023, Pp. 191-196
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಲಂಕೇಶರ ಕತೆಗಳಲ್ಲಿನ ಸಮಾಜವಾದಿ ನೆಲೆ

**ಡಾ. ರೂಪ. ಜಿ**
ಸಹ ಪ್ರಾಧ್ಯಾಪಕರು, ಕನ್ನಡವಿಭಾಗ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು.

**Abstract:**
*ಕನ್ನಡ ಸಾಹಿತ್ಯಲೋಕದಲ್ಲಿ ವಿಶಿಷ್ಟ ಮನೋಧರ್ಮದ ವ್ಯಕ್ತಿ ಪಿ.ಲಂಕೇಶ್. ಅವರು ಸಾಹಿತ್ಯದ ಮೂಲಕ ಹೊಸ ತಿಳುವಳಿಕೆಯನ್ನು ಮೂಡಿಸಹೊರಟವರು. ನವ್ಯ ಕಾಲಘಟ್ಟದಲ್ಲಿ ಸಾಹಿತ್ಯ ರಚಿಸುತ್ತಿದ್ದ ಲೇಖಕರು ಜೀವನದ ಸಂಕೀರ್ಣ ಮುಖಗಳನ್ನು ನೋಡಲು ಪ್ರಯತ್ನಿಸಿದರೆ, ಲಂಕೇಶರು ಮನುಷ್ಯನ ಅಂತರಂಗ, ಬಹಿರಂಗದ ನೆಲೆಗಳನ್ನು ಅನ್ವೇಷಿಸಲು ಪ್ರಯತ್ನಿಸಿದರು. ಈ ವಿಚಾರವಾಗಿ ಡಾ.ಯು.ಆರ್. ಅನಂತಮೂರ್ತಿಯವರು ಹೇಳಿರುವಂತೆ "ಮನುಷ್ಯ ವರ್ತನೆಗೆ ಸಂಬಂಧಪಟ್ಟ ಸಾಚಾ–ಮೋಸಗಳನ್ನು ಅತ್ಯಂತ ನಿಷ್ಠುರವಾಗಿ ವಿಶ್ಲೇಷಿಸಬಲ್ಲ ಲಂಕೇಶರ ಪ್ರತಿಭೆ ಮುಖ್ಯವಾಗಿ ನೈತಿಕವಾದದ್ದು. ಭಾವನೆಗಳನ್ನು ಮೋಸವಿಲ್ಲದೆ ಗದ್ಯದಲ್ಲಿ ಪ್ರಾಮಾಣಿಕವಾಗಿ ಚಿತ್ರಿಸಬಲ್ಲ ಇವರು ಕನ್ನಡದಲ್ಲಿ ಅಗ್ರ ಪಂಕ್ತಿಯಲ್ಲಿ ನಿಲ್ಲುವ ಲೇಖಕರು. ಇವರ ಪ್ರತಿಭೆಯ ಮುಖ್ಯ ಗುಣವೇ ನೈತಿಕತೆ." ಇದಕ್ಕೆ ಉದಾಹರಣೆಯಾಗಿ 'ಅಕ್ಕ' ಕಾದಂಬರಿಯನ್ನು ಗಮನಿಸಬಹುದು. ಅಲ್ಲಿ ಬಡತನ ಹಾಗೂ ನೈತಿಕತೆ ಎರಡನ್ನು ಕೇಂದ್ರ ಮಾಡಿಕೊಂಡು ಬರೆಯುವ ಕ್ರಮವೇ ವಿಶೇಷವಾದುದು. ಬಹುಮುಖ ಪ್ರತಿಭೆಯುಳ್ಳ ಲಂಕೇಶರು ಮನುಷ್ಯ ಸಂಬಂಧಗಳಲ್ಲಿಯ ಜಟಿಲತೆಯನ್ನು, ಭಾವವೇಶವಿಲ್ಲದೆ ಹೇಳುವ ಸಾಹಿತ್ಯ ಸೃಷ್ಟಿಸಿ ಸಮಸ್ತ ಓದುಗರನ್ನು ವಿಶೇಷವಾಗಿ ಸೆಳೆದವರು. ಮನುಷ್ಯ ಸಂಬಂಧಗಳನ್ನು ನೋಡುವಾಗ ಅವರ ಸಾಹಿತ್ಯ ಹೇಗೆ ಸಮಾಜವಾದಿ ನಿಲುವುಗಳನ್ನು ಅಂತರ್ಗವಾಗಿಸಿಕೊಂಡಿದೆ ಎಂದು ವಿವೇಚಿಸುವುದು ಈ ಲೇಖನದ ಉದ್ದೇಶ.*

**Keywords:** *ಕನ್ನಡ ಸಾಹಿತ್ಯ, ಪಿ.ಲಂಕೇಶ್, ಸಮಾನತೆ, ಸಮಾಜವಾದಿ.*

**ಪೀಠಿಕೆ**

ಲಂಕೇಶ್ ಅವರು ಕತೆಗಾರ, ಕಾದಂಬರಿಕಾರ, ಕವಿ, ನಾಟಕಕಾರ, ಅನುವಾದಕ, ವಿಮರ್ಶಕ, ಸಿನಿಮಾ ನಿರ್ದೇಶಕ, ನಟ, ಪತ್ರಕರ್ತ, ಸಂಪಾದಕ, ಸಂಘಟನಾಕಾರ, ಪ್ರಕಾಶಕ – ಹೀಗೆ ಭಿನ್ನ ರೀತಿಯಲ್ಲಿ ಕಾಣಿಸಿಕೊಂಡವರು. ಈ ಎಲ್ಲಾ ಕ್ಷೇತ್ರಗಳಲ್ಲಿಯೂ ತಮ್ಮ ಸ್ವಂತಿಕೆಯನ್ನು ಕಾಯ್ದುಕೊಂಡು ತಾನೊಬ್ಬ ಸಮರ್ಥ ಸೃಜನಾತ್ಮಕ ಪ್ರತಿಭಾಶಾಲಿ ಎಂಬುದನ್ನು ಸಾಬೀತುಪಡಿಸಿದ್ದಾರೆ. ಆದ್ದರಿಂದಲೇ ಅವರನ್ನು ಕನ್ನಡ ಸಾಹಿತ್ಯದ ವಿಶಿಷ್ಟ ಚಿಂತಕನೆಂದು ಗುರುತಿಸುವುದು. ಸಮಾಜಕ್ಕೆ ಸ್ಪಂದಿಸುತ್ತಾ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಲಂಕೇಶರು ಎಚ್ಚರದ ಪ್ರಜ್ಞೆಯುಳ್ಳವರಾಗಿದ್ದರು. ಬದುಕಿನುದ್ದಕ್ಕೂ ಹೊಸತನಕ್ಕಾಗಿ ಹಂಬಲಿಸಿ ಅದನ್ನವರು ತಮ್ಮ ಕೃತಿಗಳ ಮೂಲಕ ಅನಾವರಣಗೊಳಿಸಿದರು. ಕನ್ನಡ ಸಾಹಿತ್ಯಕ್ಕೆ ಹೊಸ ಹೊಸ ಬರಹದ ರೂಪಗಳನ್ನು ನೀಡುವ ಮೂಲಕ

***Please cite this article as:*** ರೂಪ.ಜಿ. (2023). ಲಂಕೇಶರ ಕತೆಗಳಲ್ಲಿನ ಸಮಾಜವಾದಿ ನೆಲೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 2(4), 191–196.

ವೈವಿಧ್ಯತೆಯನ್ನು ತಂದುಕೊಡುವಲ್ಲಿ ಅವರ ಕೊಡುಗೆ ಗಮನಾರ್ಹ. ಆಷಾಡಭೂತಿ ವ್ಯಕ್ತಿತ್ವಗಳನ್ನು ಅನಾವರಣಗೊಳಿಸುವ ರೀತಿಯಲ್ಲಿ ಬಳಕೆ ಮಾಡಿರುವ ಭಾಷೆಯ ಚುರುಕು, ರಚನಾ ವಿಧಾನ ಉಳಿದ ಲೇಖಕರಿಗಿಂತ ವಿಶಿಷ್ಟವಾಗಿದೆ.

ನವ್ಯ ಕತೆಗಾರರಲ್ಲಿ ಲಂಕೇಶರು ವಿಶಿಷ್ಟ ಮನೋಧರ್ಮವನ್ನುಳ್ಳವರು. ವ್ಯಕ್ತಿಯ ಅಂತರಂಗವನ್ನು ಶೋಧಿಸುವ ಅವರ ವಿಧಾನ ಮನೋಜ್ಞ, ಆಧುನಿಕತೆ, ಮೂಢನಂಬಿಕೆ, ಅಜ್ಞಾನಗಳನ್ನು ತಮ್ಮ ಕತೆಗಳಲ್ಲಿನ ಪಾತ್ರಗಳ ಮೂಲಕ ಹೇಳಲು ಪ್ರಯತ್ನಿಸಿದ್ದಾರೆ. ಸಮಕಾಲೀನ ಬದುಕಿಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುತ್ತಾರೆ. ಸಮಾಜ ಜೀವನವನ್ನು ಪರಿಶುದ್ಧಗೊಳಿಸುವ ಏಕೈಕ ಮಾರ್ಗವೆಂದರೆ ಎಲ್ಲವನ್ನು ನೇರವಾಗಿ, ನಿಷ್ಠುರವಾಗಿ ವಿಮರ್ಶೆಗೆ ಒಳಪಡಿಸುವುದು. ಈ ಅಂಶವೇ ಇವರ ಕತೆಗಳ ಜೀವಾಳ. ಆಧುನಿಕ ಜಗತ್ತಿನಲ್ಲಿ ಸೃಜನಶೀಲ ವ್ಯಕ್ತಿತ್ವವುಳ್ಳ ಮನುಷ್ಯ ಆಧುನಿಕವಾದ ಜೀವನ ಪರಿಕಲ್ಪನೆಗಳನ್ನು ತನ್ನ ಜೀವಿತ ಸತ್ಯಗಳ ಮೂಲಕ ಕಂಡುಕೊಳ್ಳಬಯಸುವ ಸಂದರ್ಭದಲ್ಲಿ ಅನುಸರಿಸಬೇಕಾದ ಮೌಲ್ಯಯುತ ಸಂಬಂಧಗಳು ಸಮಾಜಮುಖಿಯಾಗಿದ್ದಾಗ ಮಾತ್ರ ಉತ್ತಮ ಸಮಾಜವನ್ನು ಕಟ್ಟಲು ಸಾಧ್ಯ. ಆಧುನಿಕತೆಯ ಸಂದರ್ಭದಲ್ಲಿ ಮನುಷ್ಯರಲ್ಲಿ ಸಾಮಾನ್ಯವಾಗಿ ಕಂಡುಬರುವ ಅಂಶಗಳು ಮನುಷ್ಯನ ಭ್ರಷ್ಟತೆ ಮತ್ತು ಗೋಸುಂಬೆತನ. ಈ ಅಂಶಗಳು ಸಮಾಜದಲ್ಲಿ ಹೇಗೆ ತಲ್ಲಣಕ್ಕೆ ಕಾರಣವಾಗುತ್ತವೆ ಎಂಬುದನ್ನು ತಮ್ಮ ಕಥನಕಗಳ ಮೂಲಕ ವಿಶ್ಲೇಷಿಸಿದ್ದಾರೆ.

ಲಂಕೇಶರು ತಮ್ಮ ಅಭಿವ್ಯಕ್ತಿ ಕ್ರಮವನ್ನು ಸರಳವಾಗಿ ವಿವರಿಸುವುದಕ್ಕೆ ಪ್ರಮುಖ ಅಂಶಗಳೆಂದರೆ ನಿರೂಪಕ ಪ್ರಜ್ಞೆ. ಗ್ರಾಮ ಸಮುದಾಯದ ಮೂಲಭಾಷೆಯ ಸೊಗಡನ್ನು ಸಾಹಿತ್ಯದಲ್ಲಿ ಪ್ರಯೋಗಿಸುವುದಲ್ಲದೆ ಭಾಷೆಗೆ ಇಡೀ ಸಮಾಜವನ್ನು ನಿರ್ದೇಶಿಸಿ ಬದಲಿಸಬಲ್ಲ ಸಾಮರ್ಥ್ಯವಿರುವುದನ್ನು ತೋರಿಸಿದ್ದಾರೆ. ಅವರ ಸಾಹಿತ್ಯದ ವಸ್ತು ವಿಷಯದಷ್ಟೇ ಭಾಷೆ ಕೂಡಾ ಸರಳವಾದದ್ದು. ಜೊತೆಗೆ ಭಾಷೆಯ ತೀಕ್ಷ್ಣತೆ ರೂಪಗಳಲ್ಲಿ ಅನಾವರಣಗೊಂಡಿದೆ. ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ, ರಾಜಕೀಯವಾಗಿ ಮನುಷ್ಯನ ಅಸ್ತಿತ್ವವನ್ನು ಪ್ರಶ್ನಿಸುವ ಲಂಕೇಶರು ತಮ್ಮ ಭಾಷಾ ಮಾಧ್ಯಮದ ಮೂಲಕ ತಮ್ಮ ವಿರೋಧವನ್ನು ಪ್ರತಿನಿಧೀಕರಿಸಿರುವುದನ್ನು ಕಾಣುತ್ತೇವೆ. ಅವರ ಕತೆಗಳಲ್ಲಿ ಹೋರಾಟ ಹಾಗೂ ಹೋರಾಟಗಾರರ ತಾತ್ವಿಕ ಸಿದ್ಧಾಂತಗಳನ್ನು ಪಾತ್ರಗಳಲ್ಲಿ ಚಿತ್ರಿಸುವ ಪ್ರಯತ್ನವೇ ಇವರನ್ನು ಇತರ ಲೇಖಕರಿಂದ ಭಿನ್ನಗೊಳಿಸಿದೆ. ಗಾಂಧಿ, ಅಂಬೇಡ್ಕರ್, ಲೋಹಿಯಾ ಮುಂತಾದ ಸಮಾಜವಾದಿ ಚಿಂತಕರ ತಾತ್ವಿಕ ಸಿದ್ಧಾಂತಗಳು ಅವರ ಕತೆಗಳಲ್ಲಿ ಪ್ರಮುಖ ಸ್ಥಾನಪಡೆದುಕೊಂಡಿವೆ. ಮಹತ್ವಕಾಂಕ್ಷೆ, ಮನುಷ್ಯನ ಅಸ್ಥಿರತೆ, ಜಾತಿಸಂಘರ್ಷ, ಪ್ರೀತಿ, ಕಾಮ, ಸಂಸ್ಕೃತಿ, ಧರ್ಮ ಹೀಗೆ ಅನೇಕ ಸಂಗತಿಗಳು ಇವರಿಗೆ ವಸ್ತು ವಿಷಯಗಳಾಗಿವೆ. ಸಮಾಜದ ವಾಸ್ತವ ಪರಿಸ್ಥಿತಿಯಲ್ಲಿ ಹೇಗೆ ವರ್ತಿಸಬೇಕು. ಮನುಷ್ಯ ಕ್ರಿಯಾತ್ಮಕವಾಗಿ ತನ್ನ ಬದುಕನ್ನು ವ್ಯವಸ್ಥೆಗೆ ಅನುಗುಣವಾಗಿ ಬದಲಿಸಿಕೊಳ್ಳುವುದರ ಮೂಲಕ ನಾವು ನೆಲೆನಿಲ್ಲಬೇಕು. ಸಮಾಜದಲ್ಲಿ ನೆಲೆಸಿರುವ ಅಜ್ಞಾನ, ಅವಿದ್ಯಾವಂತಿಕೆ, ಮೂಢನಂಬಿಕೆ, ಧಾರ್ಮಿಕತೆ, ಸಾಂಸ್ಕೃತಿಕ ಕಟ್ಟುಪಾಡುಗಳು, ದೈವಿಕತೆ ಇಂತಹವುಗಳು ಮನುಷ್ಯನನ್ನು ಎತ್ತ ಕೊಂಡೊಯ್ಯುತ್ತದೆ ಎನ್ನುವ ಪ್ರಶ್ನೆಗಳು ಬಲವಾಗಿ ಕಾಡಿವೆ. ಕಾಮ, ಮೋಸ, ಸುಳ್ಳು, ದುರ್ಬಲತೆ, ಅತ್ಯಾಚಾರ, ಅಧಿಕಾರ, ಭ್ರಷ್ಟತೆ – ಮುಂತಾದ ಅಂಶಗಳು ಮನುಷ್ಯನನ್ನು ಹೇಗೆ ಸಣ್ಣವನನ್ನಾಗಿ ಮಾಡುತ್ತದೆ ಎನ್ನುವುದರ ವಿವೇಚನೆ ಅವರ ಪಾತ್ರಗಳಲ್ಲಿ ಕಾಣುತ್ತದೆ. ಲಂಕೇಶರು ತಮ್ಮ ನಿಲುವನ್ನು ಪ್ರಜಾಪ್ರಭುತ್ವವಾದಿ ನೆಲೆಯಲ್ಲಿಯೇ ರೂಪಿಸಿದವರು. ಭಾರತದ ಸಮಾಜವಾದಿ ಚಿಂತಕರಾದ ಮಹಾತ್ಮಗಾಂಧಿ, ರಾಮಮನೋಹರ ಲೋಹಿಯಾ, ಅಂಬೇಡ್ಕರ್, ಜಯಪ್ರಕಾಶ್ ನಾರಾಯಣ ಮುಂತಾದವರ ಚಿಂತನೆಗಳನ್ನು

ಮೆಚ್ಚಿಕೊಂಡಿದ್ದರು. ಅಷ್ಟೇ ಅಲ್ಲದೆ ಅವರ ಸಾಮಾಜಿಕವಾದ ನಿಲುವು–ಧೋರಣೆಗಳನ್ನು ತಮ್ಮ ಸಾಹಿತ್ಯದಲ್ಲಿ ರೂಪಾತ್ಮಕವಾದ ಸಾಮಾಜಿಕ ಸಿದ್ಧಾಂತ, ಧೋರಣೆಗಳಾಗಿ ಅನಾವರಣಗೊಳಿಸಿರುವುದನ್ನು ಕಾಣಬಹುದು. ಮಹಾತ್ಮಾಗಾಂಧಿಯವರ 'ಗ್ರಾಮಸ್ವರಾಜ್ಯ'ದ ಪರಿಕಲ್ಪನೆ ಲಂಕೇಶರ ಸಾಹಿತ್ಯದಲ್ಲಿದೆ. ಹಳ್ಳಿಗಳು ಬದಲಾಗಬೇಕು. ಅವು ಕಲುಷಿತವಾಗಬಾರದು. ತನ್ನತನವನ್ನು ಉಳಿಸಿಕೊಂಡು ಸಾಂಸ್ಕೃತಿಕವಾಗಿ, ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಬದಲಾಗಬೇಕು ಎಂದು ಬಯಸುವ ಲಂಕೇಶರು ಸಾಹಿತ್ಯದ ಮೂಲಕ ಹೇಗೆ ಬದಲಾವಣೆಯನ್ನು ತಂದುಕೊಳ್ಳಬೇಕು ಎಂದು ಸಾಹಿತ್ಯ ಕಥಾನಕಗಳಲ್ಲಿ ನಿರೂಪಿಸಿದ್ದು ವಿಶೇಷ ಸಂಗತಿ. ಇಂತಹ ಸೂಕ್ಷ್ಮವಾದ ತಾತ್ವಿಕ ಅಂಶಗಳನ್ನು ಗ್ರಾಮ ಸಮಾಜದ ವಿಶ್ಲೇಷಣೆಯಲ್ಲಿ ಕಾಣಬಹುದಾಗಿದೆ. ಆಧುನೀಕರಣದ ಅಪಾಯವು ಮೂಲ ಗ್ರಾಮೀಣತೆಗೆ, ಅಲ್ಲಿನ ಜನಸಮುದಾಯಕ್ಕೆ ಯಾವುದೇ ರೀತಿಯ ಅಪಾಯವನ್ನು ತಂದೊಡ್ಡದಂತೆ ಹಳ್ಳಿಗಳು ಬದಲಾಗಬೇಕು. ಹಳ್ಳಿಗಳು ಆಧುನೀಕರಣವನ್ನು ಅಳವಡಿಸಿಕೊಂಡು ಪ್ರಗತಿಯಾಗಬೇಕೆ ವಿನಃ, ಆಧುನೀಕರಣಕ್ಕೆ ಸಿಲುಕಿ ನಾಶವಾಗಬಾರದು ಎನ್ನುವುದು ಗಾಂಧಿಯವರ ಆಲೋಚನೆ. ಅಂತಹ ಆಶಯವನ್ನು ಇಟ್ಟುಕೊಂಡು 'ವಾಸನೆ', 'ಮುಟ್ಟಿಸಿಕೊಂಡವನು', 'ಸಹಪಾಠಿ', 'ಒಬ್ಬಂಟಿ', 'ಕಲ್ಲುಕರಗುವ ಸಮಯ', 'ಆಕ್ಟೋಪಸ್' ಮುಂತಾದ ಕತೆಗಳನ್ನು ರಚಿಸಿದ್ದಾರೆ.

ಡಾ. ರಾಮಮನೋಹರ ಲೋಹಿಯಾ ಅವರು ಬಹುಮುಖ್ಯವಾಗಿ ಲಿಂಗ ಅಸಮಾನತೆ ಮತ್ತು ಜಾತಿ ಅಸಮಾನತೆ ಎನ್ನುವ ಅಂಶಗಳು ಸಾಮಾಜಿಕ ಅಸಮಾನತೆಗೆ ಕಾರಣವಾಗಿವೆ ಎಂದಿದ್ದಾರೆ. ಲೋಹಿಯಾ ಹೇಳುವಂತೆ 'ಪ್ರಕೃತಿಯ ಅವಿಭಾಜ್ಯ ಅಂಗವಾಗಿ ಮೂಡಿಬಂದಿರುವ ಗಂಡು ಮತ್ತು ಹೆಣ್ಣು ಕಾಲಾಂತರದಲ್ಲಿ ತಮ್ಮ ತಮ್ಮಲ್ಲೇ ಭಿನ್ನಾಭಿಪ್ರಾಯಕ್ಕೆ ಒಳಗಾಗುತ್ತಾ ಅಸಮಾನತೆಯ ನೆಲೆಗೆ ತಲುಪಿರುವುದು ದುರದೃಷ್ಟಕರ. ಈ ಲಿಂಗ ಅಸಮಾನತೆ ಭಾರತೀಯ ಸಮಾಜದಲ್ಲಂತೂ ಅಂತರ್ಗತವಾಗಿದೆ. ಭಾರತದಲ್ಲಿ ಬಹುದೊಡ್ಡ ಸಾಮಾಜಿಕ ಅಸಮಾನತೆಯೆಂದರೆ ಜಾತಿ ಪದ್ಧತಿ'. ಈ ಅಸಮಾನತೆಗಳ ವಿವಿಧ ಆಯಾಮಗಳು ಲಂಕೇಶರ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿವೆ. 'ವಾಸನೆ' ಕತೆಯಲ್ಲಿ ಬಸವರಾಜಯ್ಯನ ಪಾತ್ರದ ಮೂಲಕ ಸಾಮಾಜಿಕ ಸ್ಥಾನಮಾನದ ಅರಿವನ್ನು ಮೂಡಿಸುವ ಚಿತ್ರಣವಿದೆ. ಕತೆಯ ಕೊನೆಯ ಸಾಲಿನಲ್ಲಿ ಸಾಕಮ್ಮ ಗೌರವಾನ್ವಿತ ಮಹಿಳೆಯಾಗಿ ಈಗ ಬದುಕುತ್ತಿದ್ದಾಳೆಂದು ಹೇಳುವ ಮೂಲಕ ಲಂಕೇಶರು ಸಾಮಾಜಿಕ ಸಮಾನತೆಯ ಬದಲಾದ ಚಿತ್ರಣವನ್ನು ನೀಡುತ್ತಾರೆ. ಇದೊಂದು ಗಮನಾರ್ಹ ಕತೆಯಾಗಿದೆ.

ಆಧುನಿಕ ಸಮಾಜದಲ್ಲಿ ಅಧಿಕಾರಶಾಹಿ ವ್ಯವಸ್ಥೆಯು ಖಾಸಗಿ ಜೀವನ ಮತ್ತು ಪ್ರಜಾಸತ್ತಾತ್ಮಕ ಚಿಂತನೆಯ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎನ್ನುವುದನ್ನು 'ದಾಹ' ಕತೆಯಲ್ಲಿ ನಿರೂಪಕನ ಪಾತ್ರದ ಮೂಲಕ ಹೇಳುತ್ತಾರೆ. ಅಸಮಾನತೆಯ ಹಲವು ಆಯಾಮಗಳು ಮೇಲುನೋಟಕ್ಕೆ ವ್ಯಕ್ತಿ ವ್ಯಕ್ತಿಗಳ ಮಧ್ಯೆ ಇದ್ದರೂ ಆಂತರ್ಯದಲ್ಲಿ ಅದೊಂದು ತಾತ್ವಿಕ ನೆಲೆಯಾಗಿದೆ. ಇದನ್ನು ಲಂಕೇಶರು 'ನಾನಲ್ಲ' ಕಥಾಸಂಕಲನದ 'ಆಕ್ಟೋಪಸ್' ಕತೆಯಲ್ಲಿ ಬರುವ ಆನಂದರಾವ್, ಪ್ರೊಫೆಸರ್ ನರಸಯ್ಯ, ಪ್ರೊಫೆಸರ್ ದೊಡ್ಡೇಗೌಡ ಹಾಗೂ ಚಿಕ್ಕೇಗೌಡ ಪಾತ್ರಗಳ ಮೂಲಕ ಚಿತ್ರಿಸಿದ್ದಾರೆ. ಈ ಕತೆಯಲ್ಲಿನ ಆನಂದರಾವ್ ಮೇಲೆ ಪ್ರೊಫೆಸರ್ ನರಸಯ್ಯ ನಡೆದುಕೊಳ್ಳುವ ರೀತಿ ಮೇಲುನೋಟಕ್ಕೆ ವ್ಯಕ್ತಿಗಳ ನಡುವಿನ ಅಸಮಾನತೆಯಂತೆ ಕಂಡರೂ ಆಂತರ್ಯದಲ್ಲಿ ಇದು ಹೊರದೇಶದ ಸಂಸ್ಕೃತಿಯು ಸ್ಥಳೀಯ ಸಂಸ್ಕೃತಿಯ ಮೇಲೆ ಉಂಟುಮಾಡುತ್ತಿರುವ ಅಸಮಾನತೆಯ ಸ್ವರೂಪವಾಗಿದೆ. ಈ ಮೂಲಕ ಲಂಕೇಶರು ಎರಡು ಸಂಸ್ಕೃತಿಗಳ ನಡುವಿನ ಭಾಷಿಕ ಮತ್ತು ಸಾಂಸ್ಕೃತಿಕ ಅಸಮಾನತೆಯನ್ನು ಅತ್ಯಂತ ಸೂಕ್ಷ್ಮವಾಗಿ ಬಿಡಿಸಿಟ್ಟಿದ್ದಾರೆ. 'ಅಸ್ವಸ್ಥರು' ಕತೆಯಲ್ಲಿನ

ಕಾಲೇಜು ಉಪನ್ಯಾಸಕ ಶಂಕರನು ತನ್ನ ಹೆಂಡತಿ ಚಂಪಾ ಜೊತೆಯಲ್ಲಿ ನಡೆದುಕೊಳ್ಳುತ್ತಿದ್ದ ರೀತಿ ಮತ್ತು ಅವಳ ಬಗ್ಗೆ ತನ್ನ ಸ್ನೇಹಿತನ ಬಳಿ ಚರ್ಚಿಸುವಲ್ಲಿನ ಮಾತುಗಳ ಹಿನ್ನೆಲೆಯಲ್ಲಿ ಲಿಂಗ ಅಸಮಾಸತೆಯ ಸ್ವರೂಪವು ವಿದ್ಯಾವಂತ ವಲಯದಲ್ಲಿಯೂ ಕಾಣಸಿಗುವ ಅಂಶವೇ ಆಗಿರುವುದು ವಿಶೇಷ. 'ದಾಹ' ಕತೆಯಲ್ಲಿ ಅಧಿಕಾರಶಾಹಿ ವ್ಯವಸ್ಥೆಯು ಖಾಸಗಿ ಜೀವನದಲ್ಲಿ ಬೃಹತ್ ಪ್ರಮಾಣದ ಅತಿಕ್ರಮಣ ಮಾಡಿ ಪ್ರಜಾಸತ್ತಾತ್ಮಕತೆಯ ಮೇಲೆ ದೊಡ್ಡ ಪರಿಣಾಮ ಬೀರಿದೆ. ಇದನ್ನು ಕತೆಯ ನಿರೂಪಕ, ಅವನ ಹೆಂಡತಿ ಸರೋಜ ಮತ್ತು ವೃತ್ತಿ ಜೀವನದಲ್ಲಿ ಪರಿಚಿತಳಾದ ಸೆಲ್ವಿ ಪಾತ್ರಗಳ ಮೂಲಕ ನೈಜವಾಗಿ ಚಿತ್ರಿಸಿದ್ದಾರೆ. 'ಅಧಿಕಾರಿಗಳು ಮತ್ತು ಕೆಲಸದವ' ಕತೆಯಲ್ಲಿ ಅಧಿಕಾರಿಗಳು ಕೆಲಸದ ದೃಷ್ಟಿಯಿಂದ ಸಮಾನರಾದರೂ ಪದನಿಮಿತ್ತವಾಗಿ ಹಿರಿಯ ಮತ್ತು ಕಿರಿಯರೆಂದು ಪರಿಗಣಿಸಲ್ಪಟ್ಟು ಅವರಿಬ್ಬರ ನಡುವೆ ಅಸಮಾನತೆಯ ಅಂಶಗಳು ಮೈದಳೆಯುತ್ತವೆ. ಆದರೆ ನಿವೃತ್ತಿಯ ನಂತರ ಕಾಡಿನ ರೈತರ ಮೇಲೆ ದಬ್ಬಾಳಿಕೆ ನಡೆಸುವಾಗ ಪಟ್ಟಭದ್ರಹಿತಾಶಕ್ತಿಗಳಾಗಿ ದಬ್ಬಾಳಿಕೆ ನಡೆಸುತ್ತಾರೆ. ಶೋಷಣೆಯ ಈ ಬಗೆಯ ವೈಚಿತ್ರ್ಯಗಳನ್ನು ಲಂಕೇಶರು ವಿಭಿನ್ನವಾಗಿ ಹಿಡಿದಿಟ್ಟಿದ್ದಾರೆ.

ಸಮಾನತೆ ಒಂದು ನಿಯಮವಾದಾಗ ಮಾತ್ರ ಅಸಮಾನತೆಯ ವಿರುದ್ಧ ಹೋರಾಡಲು ಸಾಧ್ಯ. ಆಗ ಮಾತ್ರ ಸಮಾನತೆಯೇ ಸಮಾಜದ ಅಡಿಪಾಯವಾಗುತ್ತದೆ. ಅದಕ್ಕಾಗಿ ವ್ಯತಿರಿಕ್ತ ಮಾರ್ಗಗಳನ್ನು ಹುಡುಕಬಾರದು. ಈ ಅಂಶಗಳನ್ನು 'ತೋಟದವನು' ಕತೆಯಲ್ಲಿ ಹೇಳಿದ್ದಾರೆ. ದುಡಿಮೆಯಿಂದ ಮೇಲೆ ಬಂದ ತಮ್ಮಣ್ಣ ಮತ್ತು ಬಸವಯ್ಯರೆಂಬ ರೈತರು ಆನಂತರದಲ್ಲಿ ಪೈಪೋಟಿಗೆ ಇಳಿದು ನೆಮ್ಮದಿ ಕಳೆದುಕೊಂಡು, ಕೊನೆಗೆ ಪಶ್ಚಾತ್ತಾಪದಿಂದ ಸಾಯುತ್ತಾರೆ. 'ಸುಭದ್ರ' ಕತೆಯಲ್ಲಿ ಗಂಡಿನಂತೆಯೇ ಹೆಣ್ಣು ತನ್ನ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಬಯಸುವುದು ತಪ್ಪಲ್ಲ. ಹೆಂಡತಿಯನ್ನು ಕಳೆದುಕೊಂಡ ಗಂಡು ತನ್ನ ಬದುಕನ್ನು ಇಷ್ಟಬಂದಂತೆ ಕಟ್ಟಿಕೊಳ್ಳುತ್ತಾನೆ. ಆದರೆ ಅದೇ ಹೆಣ್ಣು ತನ್ನ ಗಂಡನನ್ನು ಕಳೆದುಕೊಂಡರೂ ಸಾಮಾಜಿಕ ಕಟ್ಟುಪಾಡುಗಳಿಗೆ ಬದ್ಧಳಾಗಿಯೇ ಬದುಕಬೇಕು. ಗಂಡಿಗಿರುವ ಆಯ್ಕೆ ಹೆಣ್ಣಿಗೂ ಇರಬೇಕು ಎಂಬ ಸಮಾನತೆಯ ಚಿಂತನೆಯು ಸುಭದ್ರೆ ಪಾತ್ರದ ಮೂಲಕ ಹೊರಹೊಮ್ಮಿದೆ. ಸ್ತ್ರೀಪರ ಕಾಳಜಿ ಗಮನಾರ್ಹ.

ಲಂಕೇಶರಿಗೆ ಜಾತಿಸಂಘರ್ಷ ದೂರಾಗಬೇಕೆಂಬ ಹೆಬ್ಬಯಕೆ ಹೆಮ್ಮರವಾಗಿತ್ತು. ಅದಕ್ಕಾಗಿ ಅವರು ವ್ಯಕ್ತಿಗತವಾದ ಬದಲಾವಣೆ ಸಾಮಾಜಿಕ ಬದಲಾವಣೆಯ ರಹದಾರಿ ಎಂದು ನಂಬಿದ್ದರು. ಅಂತರ್‌ಜಾತಿಯ ವಿವಾಹ ಜಾತಿನಿರ್ಮೂಲನೆಗೆ ಪ್ರಮುಖ ಅಸ್ತ್ರ ಎಂಬ ಅಂಬೇಡ್ಕರ್ ಅವರ ಚಿಂತನೆಗಳಿಗೆ ಮಾರುಹೋದವರು. ಸೂಕ್ಷ್ಮ ಸಂವೇದನಾಶೀಲರಾದ ಲಂಕೇಶರು ಈ ರೀತಿಯಾದ ವಿಶಾಲವಾದ ಒಳದೃಷ್ಟಿಯ ಸೂಕ್ಷ್ಮಕಾಳಜಿಗೆ ಸದಾ ಜಾಗೃತವಾಗಿ ಸಮಾಜಮುಖಿಯಾಗಿ ಎಚ್ಚರಿಕೆಯಿಂದ ಕೆಲಸ ಮಾಡುತ್ತಿದ್ದರು. ಅವರ ಅನೇಕ ಕತೆಗಳಲ್ಲಿ ಇದು ಅಭಿವ್ಯಕ್ತಿಯಾಗಿದೆ. 'ಮುಟ್ಟಿಸಿಕೊಂಡವರು' ಕತೆಯಲ್ಲಿ ದಲಿತನನ್ನು ಡಾಕ್ಟರ್‌ರಾಗಿ ನೋಡುವ ಮೂಲಕ ದಲಿತನಿಗೆ ಇದ್ದ ಸಂಕೋಲೆಗಳನ್ನು ಸಡಿಲಿಸಲು ಕಾರಣರಾಗಿದ್ದಾರೆ. ಬಸವಲಿಂಗನಂತಹ ಅವಿದ್ಯಾವಂತ ಮೇಲ್ಜಾತಿ ಜಾತಿಗನಿಗೆ ಡಾ.ತಿಮ್ಮಪ್ಪನವರ ಅವಶ್ಯಕತೆ ಮನಗಾಣುವುದಷ್ಟೇ ಅಲ್ಲ ಮಾನವೀಯತೆಯ ಗುಣಗಳು ಕೂಡ ಹೊರಚೆಲ್ಲುವುದನ್ನು ಕಾಣುತ್ತೇವೆ. ಈ ಮೂಲಕ ಲಂಕೇಶರು ಅಂಬೇಡ್ಕರ್ ಅವರನ್ನು ಹೊಸ ದೃಷ್ಟಿಕೋನದಿಂದ ನೋಡಿದ್ದಾರೆ. ಸೂಕ್ಷ್ಮಮತಿಯಾಗುವುದಲ್ಲದೆ ಸಮಾಜದ ಇಂದಿನ ಸಂದಿಗ್ಧತೆಯನ್ನು ತಿಳಿಸುತ್ತಾರೆ. ಹೀಗೆ ಅವರ ಸಾಹಿತ್ಯದಲ್ಲಿ ಸಮಾಜ ಚಿಂತಕರ ವಾದಗಳನ್ನು ನೆಲೆಗೊಳಿಸುವುದಲ್ಲದೆ ಹೊಸಬಗೆಯ ಆಲೋಚನೆಗೆ ದಾರಿ ಮಾಡಿದ್ದರು. ತುಂಬ ನೋವಿನಿಂದ ಆಡುವ

ಡಾ. ತಿಮ್ಮಪ್ಪನವರ ಮಾತಿದು. "ಬಸವಲಿಂಗಪ್ಪ, ನಾನು ನಿನ್ನನ್ನು ಮುಟ್ಟಿದ್ದು ಡಾಕ್ಟರ್ ಆಗಿ, ಆದರೆ ನಿನ್ನಂಥ ಮುಗ್ಧ ಮನುಷ್ಯನಲ್ಲಿ ಕೂಡ ಈ ಮುಟ್ಟುವಿಕೆ ನಾನು ಊಹಿಸದೆ ಇದ್ದದ್ದನ್ನೂ ಮಾಡಿದೆ. ಅದು ನಿನ್ನ ತಪ್ಪಲ್ಲ. ಇದಕ್ಕಾಗಿ ನಾನು ಯಾರನ್ನೂ ಬೈಯುವುದಿಲ್ಲ. ನೀನು ಈ ಸಲ ಒಂದು ಕೆಲಸ ಮಾಡು. ನನ್ನ ಹೆಸರನ್ನು ಹೇಳಿ ಡಾಕ್ಟರ್ ಚಂದ್ರಪ್ಪನವರನ್ನು ನೋಡು" (ಪಿ.ಲಂಕೇಶ್ : ಕಲ್ಲು ಕರಗುವ ಸಮಯ, ಪುಟ–51) ಎಂದು ಪ್ರೀತಿಯ ಸಲಹೆ ನೀಡುತ್ತಾರೆ. ಜಾತಿ ಸಂಘರ್ಷವನ್ನು ಮೀರಿದ ಮಾತಿದು ಎಂದೆನಿಸುತ್ತದೆ. ಈ ಕತೆಯ ಬಸವಲಿಂಗನ ಪಾತ್ರವು ಜಾತಿವ್ಯವಸ್ಥೆಯು ಮಾನವನ ಮುಗ್ಧತೆಯನ್ನು ನಾಶಮಾಡಿ ಅವನತಿಗೆ ಕಾರಣವಾಗುವ ವ್ಯಕ್ತಿತ್ವದ ಸೂಕ್ತ ನಿದರ್ಶನವಾಗಿದೆ. ಮನುಷ್ಯನಲ್ಲಿ ಉಂಟಾಗುವ ಪಾಪ ಪರಿತಾಪಗಳು ನೋವಿನಲ್ಲಿ ಸ್ಫೋಟಗೊಳ್ಳುತ್ತವೆ. ಜಾತಿ, ಧರ್ಮ ದ್ವೇಷವನ್ನು ಮನುಷ್ಯ ಆಗ ಮೀರಿ ನಿಲ್ಲುತ್ತಾನೆ, ಎಂಬ ಸತ್ಯವನ್ನು ಬಸವಲಿಂಗ ತನಗಾದ ಸಂಗತಿಯಿಂದ ಅರಿಯುವ ಮೂಲಕ ವಿಮುಕ್ತನಾಗುವುದು ಪಶ್ಚಾತಾಪದಿಂದ, ಕತೆಯ ಅಂತ್ಯದಲ್ಲಿ ಬಸವಲಿಂಗನ ವರ್ತನೆಯೇ ಈ ಸತ್ಯವನ್ನು ತಿಳಿಸುವುದು. "ನೇರವಾಗಿ ತಿಮ್ಮಪ್ಪನವರಲ್ಲಿಗೆ ಹೋದ, ನೋವು ತುಂಬಿದ ಬಲಗಣ್ಣು ಕಂಬನಿ ಸುರಿಸುತ್ತಿದ್ದವು. ತಿಮ್ಮಪ್ಪನವರ ಕೈಹಿಡಿದುಕೊಂಡ, ಅವರನ್ನು ಅಪ್ಪಿಕೊಂಡು ಗಟ್ಟಿಯಾಗಿ ಆಳತೊಡಗಿದ, ತಿಮ್ಮಪ್ಪ ಚಲಿಸಲಿಲ್ಲ. ತಲೆ ನೇವರಿಸಲಿಲ್ಲ ಕೂಡ, ಉಸಿರು ಹತೋಟಿಗೆ ಬಂದಾಗ ಬಸವಲಿಂಗ ಏನೇನೋ ಬಡಬಡಿಸಿದ. ಅದು ಅವನಿಗೆ ಮತ್ತು ತಿಮ್ಮಪ್ಪನವರಿಗೆ ಮಾತ್ರ ಗೊತ್ತಾಗುವಂತಿತ್ತು" (ಪಿ.ಲಂಕೇಶ್: ಕಲ್ಲು ಕರಗುವ ಸಮಯ, ಪುಟ–52) ಎನ್ನುವ ಅಂತಃಕರಣದ ಪ್ರೀತಿ ಇಲ್ಲಿ ಬಿಂಬಿಸುತ್ತದೆ.

ಲಂಕೇಶರು ತಮ್ಮ ಕತೆಗಳಲ್ಲಿ ನೈಜ ಅಭಿವ್ಯಕ್ತಿ ಕ್ರಮಕ್ಕೆ ಪೂರಕವಾಗಿದ್ದುಕೊಂಡೇ, ಪ್ರಾಂತೀಯ ಭಾಷೆಯನ್ನು ಸಾಹಿತ್ಯದ ಅಭಿವ್ಯಕ್ತಿಯಾಗಿ ಬಳಸಿಕೊಂಡಿದ್ದಾರೆ. ಶಿವಮೊಗ್ಗ ಜಿಲ್ಲೆಯ ಕೆಲವು ಹಳ್ಳಿಗಾಡಿನ ಆಡುಭಾಷೆಯನ್ನು ನೇರವಾಗಿ ತಮ್ಮ ಸಾಹಿತ್ಯದಲ್ಲಿ ಬಳಸುವ ಲಂಕೇಶರು ತುಂಬ ಜಾಗೃತರಾಗಿ ಭಾಷೆಯ ಪರಿವ್ಯಾಪ್ತಿಗೆ ಮಹತ್ವ ನೀಡಿದ್ದಾರೆ. ಭಾಷಾ ವಿಷಯದಲ್ಲೂ ಲಂಕೇಶರು ಪ್ರತಿಭಾನ್ವಿತರಾಗಿ ಸಾಹಿತ್ಯ ಸೃಷ್ಟಿಸಿದವರು. ಪಾತ್ರ, ಸಂಬಂಧ, ಅವುಗಳ ಹಿನ್ನೆಲೆ, ಹಾಗೂ ಅವುಗಳ ಅನುಭವಪೂರ್ಣವಾದ ಚಿಂತನೆಯಾಗಿ ಕೂಡ ಭಾಷೆಯು ಅವರ ಸಾಹಿತ್ಯದಲ್ಲಿ ಬಳಕೆಯಾಗಿರುವುದು ಕಾಣುತ್ತದೆ. ಈ ಎಲ್ಲಾ ಅಂಶಗಳು ಅವರ ಸಾಹಿತ್ಯದ ಅಭಿವ್ಯಕ್ತಿ ರೂಪವಾಗಿ ಕಾಣುತ್ತಿವೆ. ಲಂಕೇಶರ ಸಾಹಿತ್ಯದಲ್ಲಿ 'ಅಭಿವ್ಯಕ್ತಿ ಸ್ವರೂಪ' ಕಾಣುವುದು ಪ್ರಜ್ಞಾ ಸ್ವರೂಪದ್ದು, ಅವುಗಳನ್ನು ಸಾಹಿತ್ಯದಲ್ಲಿ ಅಳವಡಿಸುವ ಕ್ರಮದಲ್ಲಿ ವಿಭಿನ್ನವಾದ ಪ್ರಯೋಗಗಳನ್ನು ರೂಪಿಸಿದ್ದಾರೆ. ಒಂದಕ್ಕಿಂತ ಇನ್ನೊಂದು ಭಿನ್ನವಾಗಿವೆ. ಪ್ರತಿಯೊಂದು ಕತೆಯೂ ರೂಪಾತ್ಮಕವಾದ ಭಾಷೆಯಲ್ಲಿ ಒಡಮೂಡಿದೆ.

ಲಂಕೇಶರ ಸಾಹಿತ್ಯ ರೂಪವು ಬೇರೆ ಸಾಹಿತಿಗಳಿಗಿಂತ ಭಿನ್ನವಾಗಿ ಕಾಣುತ್ತದೆ. ಅದಕ್ಕೆ ಅವರಿಗೆ ಇರುವ ಸೃಜನಶೀಲ ಸೂಕ್ಷ್ಮಮನಸ್ಸು, ಅದನ್ನು ನಿರಂತರವಾಗಿ ತಲ್ಲೀನರಾಗಿ ರೂಪಿಸುವ ಕಾರ್ಯ ಕೂಡ. ಸಮಾನತೆ ಪ್ರಜಾಪ್ರಭುತ್ವದ ಮೂಲ ಆಶಯ. ಸಮಾನತೆ ಸಮಾಜವಾದಿ ಚಿಂತನೆಯ ತಳಹದಿ. ಅಸಮಾನತೆ ಒಂದು ಮನೋದೃಷ್ಟಿ. ಅದನ್ನು ಶಾಸನದಂತೆ ಪ್ರತಿಪಾದಿಸುವುದು ಅವಿವೇಕ. ಕಾಲಾನುಕ್ರಮದಲ್ಲಿ ಇಂತಹ ಅಸಮಾನತೆಯ ಅಂಶಗಳು ಸಾಮಾಜಿಕ ವ್ಯವಸ್ಥೆಯ ಒಳಗೆ ಬದಲಾಗುವುದು ಉತ್ತಮ ಬೆಳವಣಿಗೆ. ವ್ಯಕ್ತಿವ್ಯಕ್ತಿಗಳ ನಡುವೆ, ಸಮುದಾಯ ಸಮುದಾಯಗಳ ನಡುವೆ, ರಾಷ್ಟ್ರ ರಾಷ್ಟ್ರಗಳ ನಡುವೆ ಸಮಾನತೆಯನ್ನು ಸಾಧಿಸಿದಾಗ ಮಾತ್ರವೇ ಮನುಕುಲದ ನೈಜ ಅಭಿವೃದ್ಧಿ ಸಾಧ್ಯ. ಲಂಕೇಶರ ಕತೆಗಳಲ್ಲಿ ಹಾಸುಹೊಕ್ಕಾಗಿ ಚಿತ್ರಿತವಾಗಿರುವುದೇ ಅವರ ಸಮಾಜವಾದಿ ಚಿಂತನೆಗೆ ಸಾಕ್ಷಿ. ಲಂಕೇಶರ

ಕತೆಗಳನ್ನು ಓದಿದ ಮೇಲೆ ನಮಗೆ ತಿಳಿಯುವ ಅಂಶವೇನೆಂದರೆ ಜಾತಿ, ವರ್ಗ, ಲಿಂಗ ಬಣ್ಣ ಮುಂತಾದ ವಿಚಾರಗಳನ್ನು ಇಟ್ಟುಕೊಂಡು ವಿಶೇಷವಾಗಿ ಕತೆಗಳನ್ನು ಕಟ್ಟಿದ್ದಾರೆ. ಒಂದೊಂದು ಪಾತ್ರವೂ ವಿಶೇಷವೇ. ಹೀಗೆ ಲಂಕೇಶರ ಕತೆಗಳನ್ನು ಓದಿದ ಮೇಲೆ ಸಮಾಜವಾದಿ ಚಿಂತನೆಗಳು ಲಂಕೇಶರಿಗೆ ಹೇಗೆ ಪ್ರಭಾವ ಬೀರಿವೆ ಎನ್ನುವುದನ್ನು ಗಂಭೀರವಾಗಿ ವಿಶ್ಲೇಷಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಗೋಪಾಲಕೃಷ್ಣ ಅಡಿಗ. *ನಾನಲ್ಲ ಕಥಾ ಸಂಕಲನದ ಮುನ್ನುಡಿ.*
- ಲಂಕೇಶ್ ಪಿ. (2009). *ಬಿರುಕು.* ಲಂಕೇಶ್ ಪ್ರಕಾಶನ.
- ಲಂಕೇಶ್ ಪಿ. (1978). *ಮುಸ್ಸಂಜೆಯ ಕಥಾ ಪ್ರಸಂಗ.* ಲಂಕೇಶ್ ಪ್ರಕಾಶನ.
- ಲಂಕೇಶ್ ಪಿ. (2009). *ಅಕ್ಕ.* ಲಂಕೇಶ್ ಪ್ರಕಾಶನ.
- ಮರಳಸಿದ್ಧಪ್ಪ ಕೆ. (2023). *ಪಿ.ಲಂಕೇಶರ ಸಮಗ್ರ ಸಾಹಿತ್ಯ.* ಇಂದಿರಾ ಲಂಕೇಶ್ ಪ್ರಕಾಶನ.
- ರಾಮಚಂದ್ರನ್ ಸಿ.ಎನ್. *ಪರಂಪರೆ ಮತ್ತು ಪ್ರತಿರೋಧ.*
- ಶೇಷಗಿರಿರಾವ್. ಎಲ್. ಎಸ್. (1999). *ಹೊಸಗನ್ನಡ ಸಾಹಿತ್ಯ.* ಅಂಕಿತ ಪುಸ್ತಕ.